

ಸರ್ಕಾರ ವಿರೋಧ ವ್ಯಕ್ತಪಡಿಸಿದೆ. ಪರಿಸರ ಸೂಕ್ಷ್ಮ ಪ್ರದೇಶಗಳೆಂದು ಗುರುತಿಸಲಾದ ವಲಯಗಳು ಸ್ಥಳೀಯ ಜನರ ಜೀವನೋಪಾಯಗಳಿಗೆ ಅಡ್ಡಿಯುಂಟು ಮಾಡುವುದರಿಂದ ರಾಜ್ಯ ಈ ನಿರ್ಧಾರ ತೆಗೆದುಕೊಂಡಿದೆ ಎಂಬ ಸಮಜಾಯಿಷಿ ಸರ್ಕಾರದ್ದು. ಸಂತ್ರಸ್ತ ಜನರ ಜೀವನೋಪಾಯಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ಆದರೆ, ಜನರ ಜೀವನೋಪಾಯ ಹಾಗೂ ಅಭಿವೃದ್ಧಿ ಚಟುವಟಿಕೆಗಳ ನೆಪದಲ್ಲಿ ಗಾಸಿಗೊಳಿಸುವ ಪರಿಸರವನ್ನು ಸರಿಪಡಿಸುವುದು ಸರ್ಕಾರಕ್ಕೆ ಸಾಧ್ಯವಿದೆಯೆ?

ಕಸ್ತೂರಿರಂಗನ್ ವರದಿ ಜಾರಿಗೊಳಿಸುವುದರ ಬಗ್ಗೆ ಕರ್ನಾಟಕವೂ ಸೇರಿದಂತೆ ಪಶ್ಚಿಮಘಟ್ಟಗಳ ವ್ಯಾಪ್ತಿಯ ರಾಜ್ಯಗಳು ಅನುಸರಿಸುತ್ತಿರುವ ನಕಾರಾತ್ಮಕ ಧೋರಣೆಯ ಹಿನ್ನೆಲೆಯಲ್ಲಿ, ಪರಿಸರ ಸಂರಕ್ಷಣೆಯ ಕುರಿತ ಚರ್ಚೆಗಳು ಮತ್ತಷ್ಟು ವ್ಯಾಪಕವಾಗಿ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ, ಗಾಡ್ಗೀಳ್ ಮತ್ತು ಕಸ್ತೂರಿರಂಗನ್ ವರದಿಗಳ ಸಾಧ್ಯತೆಗಳನ್ನೂ ಹಾಗೂ ಘಟ್ಟ ಪ್ರದೇಶಗಳಲ್ಲಿನ ನಿಜವಾದ ಸವಾಲುಗಳ ಬಗ್ಗೆ ಸಾವಧಾನದಿಂದ ಯೋಚಿಸಬೇಕಾಗಿದೆ.

## ಎರಡು ವರದಿಗಳು, ನೂರಾರು ನಿಲುವುಗಳು

ಪಶ್ಚಿಮ ಘಟ್ಟ ಸಂರಕ್ಷಣೆಯ ದೃಷ್ಟಿಯಿಂದ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಸಂಶೋಧನಾ ವರದಿಯೊಂದನ್ನು ನೀಡುವಂತೆ ಅಂದಿನ ಕೇಂದ್ರ ಪರಿಸರ ಸಚಿವರಾಗಿದ್ದ ಜೈರಾಂ ರಮೇಶ್ ಅವರು ಮಾಧವ ಗಾಡ್ಗೀಳ್ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದರು. ಸಮಿತಿಯು ದೀರ್ಘ ಅಧ್ಯಯನ ನಡೆಸಿ, ಪಶ್ಚಿಮ ಘಟ್ಟದ ಉದ್ದಗಲಕ್ಕೂ ಸಂಚರಿಸಿ, ವಿಷಯಗಳನ್ನು ಸಂಗ್ರಹಿಸಿ 2011ರ ಆಗಸ್ಟ್ 31ರಂದು ಕೇಂದ್ರಸರ್ಕಾರಕ್ಕೆ ವರದಿ ಸಲ್ಲಿಸಿತು. ಅಷ್ಟರಲ್ಲಿ ಪರಿಸರ ಸಚಿವರಾಗಿ ಜಯಂತಿ ನಟರಾಜನ್ ಅಧಿಕಾರ ಸ್ವೀಕರಿಸಿದ್ದರು. ಪರಿಸರ ಸಂರಕ್ಷಣೆಗಾಗಿ ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಮಾಡುವಂತೆ ಮಾಧವ ಗಾಡ್ಗೀಳ್ ವರದಿ ಮಾಡಿದ ಶಿಫಾರಸುಗಳಿಗೆ ಅನೇಕರಿಂದ ಆಕ್ಷೇಪಗಳೂ ವ್ಯಕ್ತವಾಗಿದ್ದವು. ಹಾಗಾಗಿ ಆ ವರದಿಯ ಶಿಫಾರಸುಗಳನ್ನು ಪುನರ್ ಪರಿಶೀಲನೆ ಮಾಡಬೇಕು ಎಂಬ ಉದ್ದೇಶದಿಂದ ಡಾ. ಕಸ್ತೂರಿರಂಗನ್ ಅವರ ಅಧ್ಯಕ್ಷತೆಯಲ್ಲಿ 'ಉನ್ನತ ಮಟ್ಟದ ಕಾರ್ಯಕಾರಿ ಸಮಿತಿ'ಯೊಂದನ್ನು ರಚಿಸಲಾಯಿತು. ಪರಿಸರ ತಜ್ಞರಾದ ಮಾಧವ ಗಾಡ್ಗೀಳ್ ವರದಿಯ ಶಿಫಾರಸುಗಳ ಪರಿಶೀಲನೆಯನ್ನು ಬಾಹ್ಯಾಕಾಶ ವಿಜ್ಞಾನಿಯಾಗಿರುವ ಡಾ. ಕಸ್ತೂರಿ ರಂಗನ್ ನೇತೃತ್ವದ ಸಮಿತಿ ಹೇಗೆ ಮಾಡುತ್ತದೆ ಎಂಬ ಆಕ್ಷೇಪಗಳೂ ಹೊಸ ಸಮಿತಿ ರಚನೆಯ ಬೆನ್ನಿಗಿದ್ದವು.

'ಡಾ. ಮಾಧವ ಗಾಡ್ಗೀಳ್ ಅವರು ಪಶ್ಚಿಮ ಘಟ್ಟದಲ್ಲಿ ಪ್ರವಾಸ ಮಾಡಿದ್ದಾಗ, ಅವರೊಡನೆ ಪರಿಸರ ತಜ್ಞರ ತಂಡವೇ ಇತ್ತು. ಹಾಸನ, ಸಕಲೇಶಪುರದ ಭಾಗಗಳಲ್ಲಿ ಅವರು ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಮತ್ತೊಬ್ಬರು ವಿಜ್ಞಾನಿ, ಡಾ. ಟಿ.ವಿ. ರಾಮಚಂದ್ರ ಅವರು ತಂಡದೊಂದಿಗೆ ಬಂದಿದ್ದಾಗ, ಅವರಿಗೆ ನಾವು ಸ್ಥಳೀಯ ಮಾಹಿತಿಗಳನ್ನು ಕೊಟ್ಟಿದ್ದೆವು. ಸ್ಥಳೀಯ ಸಮುದಾಯಗಳೊಂದಿಗೆ ಬೆರೆತು ಅವರಿಂದ ಮಾಹಿತಿ ಸಂಗ್ರಹಿಸಿ ಅವರು ವರದಿ ಸಿದ್ಧಪಡಿಸಿದ್ದರು. ಕಸ್ತೂರಿ ರಂಗನ್ ಅವರನ್ನೂ ಭೇಟಿಯಾಗಿ ಮಾಹಿತಿ ನೀಡಿದ್ದೆವು' ಎಂದು ಹಾಸನದ ವಕೀಲರಾದ, ಪರಿಸರ ಹೋರಾಟದಲ್ಲೂ ತೊಡಗಿಸಿಕೊಂಡಿರುವ ಕಿಶೋರ್ ಕುಮಾರ್ ಹಾಸನ ಹೇಳುತ್ತಾರೆ.

'ಗಾಡ್ಗೀಳ್ ವರದಿಯು ಪಶ್ಚಿಮ ಘಟ್ಟವನ್ನು ಮೂರು ಹಂತಗಳಲ್ಲಿ ಗುರುತಿಸುತ್ತದೆ. ಪರಿಸರ ಸೂಕ್ಷ್ಮ ವಲಯ ಒಂದು, ಎರಡು ಮೂರು ಎಂದು ಮೂರು ವಲಯಗಳಲ್ಲಿ ಗುರ್ತಿಸಲಾಗಿತ್ತು. ಒಂದನೇ ವಲಯದಲ್ಲಿ ಯಾವುದೇ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸದೆ, ಕಾಡಿನಂಚಿನ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎಂದು ವರದಿ ಹೇಳಿತ್ತು. ಆದರೆ ಕಸ್ತೂರಿ ರಂಗನ್ ವರದಿಯ ಪ್ರಕಾರ ಇಡೀ ಪಶ್ಚಿಮ ಘಟ್ಟವನ್ನು ಸ್ವಾಭಾವಿಕ ಭೂಪ್ರದೇಶ ಮತ್ತು ಸಾಂಸ್ಕೃತಿಕ ಭೂ ಪ್ರದೇಶವೆಂದು ವಿಭಾಗಿಸಿ, ಸಂರಕ್ಷಿತ ಪ್ರದೇಶವನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಷರತ್ತುಬದ್ಧ ಅಭಿವೃದ್ಧಿಗೆ ಅವಕಾಶಗಳನ್ನು ಕಲ್ಪಿಸಲಾಗಿದೆ. ಕಿರು ಜಲವಿದ್ಯುತ್ ಯೋಜನೆಗಳು,

